ಎಂದು ಖುಷಿಯಿಂದ ಸಿನಿಮಾದ ಕುರಿತು ಹೇಳುವ ಅಂಜಲಿ ಈಗ ಕಾನೂನು ಪದವಿ ಓದುತ್ತಿದ್ದಾರೆ.

'ಎಲ್ಲೂ ಹೆಣ್ಮಕ್ಳ ಕೈಲಿ ಆದಾಗಲ್ಲ ಇದಾಗಲ್ಲ ಅಂತ ಹೇಳ್ತಾನೇ ಇರ್ತಾರೆ. ಆದರೆ ನಾನು ಯಾವತ್ತೂ ಆ ರೀತಿ ಯೋಚನೆ ಮನಸ್ಸಿಗೆ ಸುಳಿಯಲೂ ಬಿಟ್ಟಿಲ್ಲ. ನಾನು ಹೆಣ್ಣು, ಅದಕ್ಕಾಗಿ ನನ್ನಿಂದ ಈ ಕೆಲಸ ಆಗಲ್ಲ ಅಂತ ಯೋಚಿಸುವುದೇ ತಪ್ಪು. ಬೇರೆ ಹುಡುಗ ಆ ಕೆಲಸ ಮಾಡಿದ್ದರೆ ಎಷ್ಟು ಕಷ್ಟವಾಗುತ್ತಿತ್ತೋ ಅಷ್ಟೇ ಕಷ್ಟ ಹೆಣ್ಣು ಮಾಡಿದಾಗಲೂ ಆಗತ್ತೆ. ಹೆಣ್ಣು ಎಂಬ ಕಾರಣಕ್ಕಾಗಿಯೇ ಆಗುವುದಿಲ್ಲ ಎನ್ನುವುದು ತಪ್ಪು ಮನಸ್ಥಿತಿ. ಈ ಮನಸ್ಥಿತಿಯ ಕಾರಣದಿಂದಲೇ ಇಂದು ಗಾಂಧಿನಗರದಲ್ಲಿ ಬೆರಳೆಣಿಕೆಯಷ್ಟೇ ನಿರ್ದೇಶಕಿಯರು ಇರುವುದು' ಎಂದು ದಿಟ್ಟವಾಗಿಯೇ ಹೇಳುತ್ತಾರೆ ಅಂಜಲಿ.

'ಒಂದು ಕುಟುಂಬದಲ್ಲಿ ಅಪ್ಪ ಅಮ್ಮನಷ್ಟೇ ಅಜ್ಜ ಅಜ್ಜಿ, ಮಕ್ಕಳು ಅಕ್ಕ ತಂಗಿ ಎಲ್ಲರೂ ಮುಖ್ಯರಾಗಿರುತ್ತಾರಲ್ಲವೇ? ಹಾಗೆಯೇ ಸಿನಿಮಾದಲ್ಲಿಯೂ ನಾಯಕನಷ್ಟೇ ನಾಯಕಿ ಉಳಿದ ಪಾತ್ರಗಳೂ ಮುಖ್ಯ. ಒಂದು ಕಥೆಯನ್ನು, ಸಿನಿಮಾದ ವ್ಯಾಕರಣವನ್ನು ಈ ರೀತಿಯ ಯೋಚನಾಕ್ರಮದಿಂದ ಕಟ್ಟುವ ಅಗತ್ಯ ಇದೆ' ಎನ್ನುವ ಅಂಜಲಿ ಇತ್ತೀಚೆಗೆ ಚಿತ್ರರಂಗದಲ್ಲಿ ಕೇಳಿಬರುತ್ತಿರುವ ಹೊಸಬರ ಕಲರವದಲ್ಲಿ ಮಹಿಳಾಧ್ವನಿಗೂ ಸಾಕಷ್ಟು ಅವಕಾಶ ಸಿಗುತ್ತಿರುವ ಬಗ್ಗೆ ಖುಷಿ ವ್ಯಕ್ತಪಡಿಸುತ್ತಾರೆ.

'ಇನ್ನೂ ಸಾಕಷ್ಟು ನಿರ್ದೇಶಕರ ಜೊತೆಗೆ ಕೆಲಸ ಮಾಡಿ ಅನುಭವ ಪಡೆದುಕೊಂಡ ನಂತರ ನಿರ್ದೇಶನಕ್ಕಿಳಿಯುತ್ತೇನೆ' ಎನ್ನುವ ಅವರು 'ನಾನು ಮಾಡುವ ಬಗೆಯ ಸಿನಿಮಾಗಳು ತಕ್ಷಣಕ್ಕೆ ಜನರಿಗೆ ಇಷ್ಟವಾಗದಿರಬಹುದು. ಆದರೆ ಒಂದಿಷ್ಟು ಕಾಲದ ನಂತರವಾದರೂ ಜನರು ಇಷ್ಟಪಟ್ಟೇ ಪಡುತ್ತಾರೆ ಎಂದು ವಿಶ್ವಾಸದಿಂದ ಹೇಳುತ್ತಾರೆ.

ಗಾಂಧಿನಗರದ ಪುರುಷರ ಅಡ್ಡಾದಲ್ಲಿ ನಾಪತ್ತೆಯಾಗಿರುವ ಸ್ತ್ರೀಸಂವೇದನೆಯ ಗಟ್ಟಿ ಸ್ವರವನ್ನು ತನ್ನೊಳಗೆ ತುಂಬಿಕೊಂಡಿರುವಂತೆ ಕಾಣುವ ಅಂಜಲಿ ಅವರ ಸೂಕ್ಷ್ಮ ಸಂವೇದನೆಯ ಮಾತುಗಳು ಮತ್ತು ಕಟ್ಟಿಕೊಂಡಿರುವ ಕನಸುಗಳಲ್ಲಿ ಚಂದನವನದ ನಾಳೆಗಳ ಶುಭಸೂಚನೆ ಗೋಚರವಾಗುತ್ತದೆ.

■

# ಪೊಗರು ಹುಡುಗಿಯ ಪತ್ರಿಕಾಗೋಷ್ಠಿ!

'ಈ ಸಿನಿಮಾದಲ್ಲಿ ನಂದು ತುಂಬ ಬಬ್ಲಿ ಬಬ್ಲಿ ಕ್ಯಾರೆಕ್ಟರ್. ತುಂಬ ಚೆನ್ನಾಗಿದೆ. ತುಂಬ ಇಂಪಾರ್ಟೆಂಟ್ ಕ್ಯಾರೆಕ್ಟರ್. ಕಥೆಗೆ ಒಂದು ಟ್ವಿಸ್ಟ್ ಕೊಡೊ ಕ್ಯಾರೆಕ್ಟರ್. ಹೀಗೆ ಬಂದು ಹಾಗೆ ಹೋಗೋ ಪಾತ್ರ ಅಲ್ಲ'

—ಇದು ಬಹುತೇಕ ನಾಯಕಪ್ರಧಾನ ಸಿನಿಮಾಗಳ ಪತ್ರಿಕಾಗೋಷ್ಠಿಗಳಲ್ಲಿ ನಾಯಕಿಯರು ಒಪ್ಪಿಸುವ ಗಿಳಿಪಾಠ. ಅವರ ತುಟಿಗಳು ಹೇಳುತ್ತಿರುವಾಗಲೇ ಅವರ ಕಣ್ಣುಗಳು ಇದ್ಯಾವುದೂ ಸಿನಿಮಾದಲ್ಲಿ ಆಗಿಲ್ಲ ಎಂದು ಸಾರಿ ಸಾರಿ ಹೇಳುತ್ತಿರುತ್ತವೆ. ಸಿನಿಮಾದಲ್ಲಿಯಷ್ಟೇ ಅಲ್ಲ, ಪತ್ರಿಕಾಗೋಷ್ಠಿಗಳಲ್ಲಿಯೂ ನಾಯಕಿಯರು ಪ್ರದರ್ಶನದ ಗೊಂಬೆಗಳೇ! ಹಾಗಾಗಿ ಮೈಕ್ ಎದುರಿಗಿಂತ ಅವರು ಪತ್ರಿಕಾಗೋಷ್ಠಿ ಮುಗಿದ ಮೇಲೆ ಕ್ಯಾಮೆರಾ ಎದುರು ಕೊಡುವ ಪೋಸ್‌ಗಾಗಿಯೇ ಎಲ್ಲರೂ ಕಾಯುತ್ತಿರುತ್ತಾರೆ. ಇದು ಒಂದು ರೀತಿಯಲ್ಲಿ ಚಿತ್ರರಂಗ ನಟಿಯರನ್ನು ಬಳಸಿಕೊಳ್ಳುವ ರೀತಿಗೂ ಕೈಗನ್ನಡಿ.

ನೂರಕ್ಕೇ ನೂರು ನಾಯಕಪ್ರಧಾನ ಸಿನಿಮಾಗಳಲ್ಲಿಯೂ ಸಾಮಾನ್ಯವಾಗಿರುವ ಈ ಮೇಲಿನ ಅಂಶಗಳನ್ನು ಚಿಂದಿ ಮಾಡುವ ಪತ್ರಿಕಾಗೋಷ್ಠಿಯೊಂದು ಇತ್ತೀಚೆಗೆ ನಡೆಯಿತು! ಅದು ಬೆಂಗಳೂರಿನ ಶೆರಟಾನ್ ಹೋಟೆಲ್‌ನಲ್ಲಿ.

ಅದು ಧ್ರುವ ಸರ್ಜಾ ನಾಯಕನಾಗಿ ನಟಿಸಿರುವ ನಂದಕಿಶೋರ್ ನಿರ್ದೇಶನದ 'ಪೊಗರು' ಸಿನಿಮಾ ಪತ್ರಿಕಾಗೋಷ್ಠಿ. ಆಗಷ್ಟೇ ಧ್ರುವ ಸರ್ಜಾ ಸೋಷಿಯಲ್ ಮೀಡಿಯಾ, ಮಾಧ್ಯಮಗಳಲ್ಲಿ ಚಿತ್ರಮಂದಿರ ಪೂರ್ತಿ ತೆರೆಯಲು ಅವಕಾಶ ಕೊಡದ ಸರ್ಕಾರದ ವಿರುದ್ಧ ತಮ್ಮ 'ಪೊಗರು' ಪ್ರದರ್ಶನ ಮಾಡಿ ಮುಗಿಸಿದ್ದರು. ಹಾಗಾಗಿ ಪತ್ರಕರ್ತರೆಲ್ಲರೂ ಅವರ ಸಿಡಿಮಾತಿನ ನಿರೀಕ್ಷೆಯಲ್ಲಿ ಪತ್ರಿಕಾಗೋಷ್ಠಿಗೆ ಹೋದರೆ ಅಲ್ಲಿ ತಂಗಾಳಿಯಂಥ ಹುಡುಗಿ ನಗುತ್ತ ಕೂತಿದ್ದರು. ಇಡೀ ವೇದಿಕೆಯ ಮೇಲೆ ಕೇವಲ ನಾಯಕಿ ರಶ್ಮಿಕಾ ಮಂದಣ್ಣ ಕೂತಿದ್ದರು!

ಬಹುಶಃ ನಾಯಕನ ಸ್ಟಾರ್‌ಡಮ್ ಅನ್ನೇ ನೆಚ್ಚಿಕೊಂಡ ಸಿನಿಮಾದ ಪ್ರಚಾರಕ್ಕೆ ಸಂಬಂಧಿಸಿದಂತೆ ಕೇವಲ ನಾಯಕಿ ಪತ್ರಿಕಾಗೋಷ್ಠಿ ನಡೆಸಿದ್ದು ಕನ್ನಡ ಚಿತ್ರರಂಗದಲ್ಲಿ ಅಪರೂಪವೇ ಸರಿ. ಎಲ್ಲ ಪತ್ರಕರ್ತರನ್ನು ಎದುರಿಸಿ ನಿಂತ ರಶ್ಮಿಕಾ ಮುಖದಲ್ಲಿ ಆತ್ಮವಿಶ್ವಾಸ ತುಂಬಿ ತುಳುಕುತ್ತಿತ್ತು. ಚಿತ್ರರಂಗದಲ್ಲಿ ಕೆಲವೊಂದಿಷ್ಟಾದರೂ ಬದಲಾಗಿದೆ ಎಂಬುದರ ಸೂಚಕವಾಗಿ ಅವರ ಮುಗುಳ್ನಗು ಕಾಣಿಸುತ್ತಿತ್ತು. ಇದು ಚಿತ್ರತಂಡದ ಪ್ರಚಾರ ತಂತ್ರದ ಭಾಗವಾಗಿರಬಹುದು. ಆದರೆ ಒಂದು ಸಿನಿಮಾದ ಪ್ರಚಾರತಂತ್ರದ ಕೇಂದ್ರಲ್ಲಿ ನಾಯಕಿಗೆ ಇಷ್ಟು ಮಹತ್ವದ ಸ್ಥಾನ ದೊರೆಯುವುದು ಒಳ್ಳೆಯದರ ಸೂಚನೆಯೇ ಅಲ್ಲವೇ? ತೆಲುಗಿಗೆ ಹೋಗಿ ಬಹುಬೇಡಿಕೆಯ ನಟಿಯಾಗಿದ್ದು ಇದರ ಹಿನ್ನೆಲೆಯಲ್ಲಿದೆ. ಈಗಲೂ ಕನ್ನಡದಲ್ಲಿ ಅವರನ್ನು ನಾಯಕಿಯಾಗಿಟ್ಟುಕೊಂಡು ಸಿನಿಮಾ ಮಾಡಲು ಯತ್ನಿಸುತ್ತಿರುವವರ ದಂಡೇ ಗಾಂಧಿನಗರದಲ್ಲಿದೆ. ಅವರಿಗೊಂದು ಕಹಿಸುದ್ದಿಯನ್ನೂ ರಶ್ಮಿಕಾ ಇದೇ ಪತ್ರಿಕಾಗೋಷ್ಠಿಯಲ್ಲಿ ನೀಡಿದ್ದಾರೆ. 'ಮುಂದಿನ ಜೂನ್ ಜುಲೈ ಅಗಸ್ಟ್' ಎಂದು ಬೆರಳು ಮಡಿಸುತ್ತ ಹೋದ ರಶ್ಮಿಕಾ ಸದ್ಯಕ್ಕಂತೂ ನನಗೆ ಕಥೆ ಕೇಳುವಷ್ಟೂ ಪುರಸೊತ್ತಿಲ್ಲ ಎಂದಿದ್ದಾರೆ. 'ಅಲ್ಲಿಯವರೆಗೆ ಸಿನಿಮಾ ಒಪ್ಪಿಕೊಂಡು ಚಿತ್ರತಂಡವನ್ನು ಕಾಯಿಸಲು ನನಗೆ ಇಷ್ಟವಿಲ್ಲ' ಎಂದು ಬೆಣ್ಣೆಯಲ್ಲಿ ಕೂದಲು ತೆಗೆದಂತೆ ಕನ್ನಡ ಚಿತ್ರರಂಗಕ್ಕೆ ತಾತ್ಕಾಲಿಕವಾಗಿ ಮನದ ಗೇಟು ಮುಚ್ಚಿದ್ದಾರೆ.

ಪ್ರತಿಭೆಯಲ್ಲಿ, ಸೌಂದರ್ಯದಲ್ಲಿ ರಶ್ಮಿಕಾರನ್ನು ಸರಿಗಟ್ಟಬಲ್ಲ, ಹಿಂದಿಕ್ಕಬಲ್ಲ ಪ್ರತಿಭೆಗಳು ಕನ್ನಡದಲ್ಲಿಯೂ ಇಲ್ಲದೇನಿಲ್ಲ. ಆದರೆ ಅವರು ನಮ್ಮ ನಿರ್ದೇಶಕರು, ನಿರ್ಮಾಪಕರ ಕಣ್ಣಿನಲ್ಲಿ ಪ್ರತ್ಯೇಕ ಪತ್ರಿಗಾಗೋಷ್ಠಿ ನಡೆಸಬಲ್ಲಷ್ಟು ಮುಖ್ಯರಾಗಿ ಕಾಣಿಸಬೇಕಲ್ಲ. ಅವರ ಕಣ್ಣಿನಲ್ಲಿ ಅವರು ಮುಖ್ಯರೆನಿಸಬೇಕಾದರೆ ಅವರೂ ನೆರೆಭಾಷೆಗಳಿಗೆ ಹೋಗಿ ಹೆಸರು ಮಾಡಬೇಕಷ್ಟೆ.

■

